ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೇನಾದರೂ ಕಡಿಮೆ ದರ ನಿಗದಿಪಡಿಸಲಾಗಿದೆಯೇ?

ಶ್ರೀ ಶಿವಾನಂದ ನಾಯ್ಕ (ಸಣ್ಣ ಕೈಗಾರಿಕಾ ಸಚಿವರು) :

ಅ) ವೀರಸಂದ್ರ 2ನೇ ಹಂತ ಮತ್ತು ಬೊಮ್ಮಸಂದ್ರ 2ನೇ ಹಂತ ಕೈಗಾರಿಕಾ ವಸಾಹತುಗಳನ್ನು 2003–04ರಲ್ಲಿ ಸ್ಥಾಪಿಸಲಾಗಿದೆ.

ಆ) 98 ನಿವೇಶನಗಳು ಹಾಗೂ 29 ಶೆಡ್ಡುಗಳನ್ನು ವಿತರಿಸಲಾಗಿದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ 2 ಮಳಿಗೆಗಳು ಹಾಗೂ 5 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಈ) ಹಂಚಿಕೆಯಾಗಿರುವ ಎಲ್ಲಾ ಶೆಡ್ಡುಗಳಿಗೆ ದರ ನಿಗದಿ ಪಡಿಸಲಾಗಿದೆ.

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ, ಮಳಿಗೆ/ ನಿವೇಶನದ ದರದ ಮೇಲೆ ಶೇಕಡ 40ರಷ್ಟು ಅನುದಾನದೊಂದಿಗೆ (ರೂ.2.00 ಲಕ್ಷಕ್ಕೆ ಮೀರದಂತೆ) ದರ ನಿಗದಿಪಡಿಸಲಾಗಿದೆ.

1314 (1649) ಡಾ॥ ಅನ್ನದಾನಿ ಕೆ. (ಮಳವಳ್ಳಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಗ್ರಾಮಸಹಾಯಕರಾಗಿ 4ನೇ ದರ್ಜೆ ನೌಕರರು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಅವರುಗಳನ್ನು ಖಾಯಂಗೊಳಿಸಲು ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಈ ನೌಕರರಲ್ಲಿ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದವರು ಹೆಚ್ಚಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ತುಳಿತಕ್ಕೆ ಒಳಗಾಗಿರುವ ನೌಕರರನ್ನು 25–30 ವರ್ಷಗಳಿಂದ ಏಕೆ ಖಾಯಂಗೊಳಿಸಿರುವುದಿಲ್ಲ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) :

ಅ) ಇಲ್ಲ. ಗ್ರಾಮಸಹಾಯಕರು ಮಾಸಿಕ ರೂಪಾಯಿ.2000/– ರಂತೆ ಮಿತವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಗ್ರಾಮಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪಿತ್ತಿದೆ. ಗ್ರಾಮ ಸಹಾಯಕರು ಮಿತವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಅವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡದೇ ಇರುವುದರಿಂದ ಖಾಯಂಗೊಳಿಸಲು ಬರುವುದಿಲ್ಲ.

ಇ) ಹೌದು.

ಈ) (ಆ) ದಲ್ಲಿ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1315 (1876) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಸೋಶಿಯಲ್ ಫಾರೆಸ್ಟ್ರಿ) ಅಡಿಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ಹೊಸತೋಪುಗಳು ಯಾವುವು;

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಹಣದ ಹಾಗೂ ಖರ್ಚು ಮಾಡಿದ ಹಣದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಇ) ಸರ್ಕಾರ ಕೈಗೊಂಡ ಕ್ರಮವೇನು;

ಈ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳೇನು?